# ಪ್ರಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ಭಾರತದ ಮಹತ್ವಾಕಾಂಕ್ಷೆಯ 'ಚಂದ್ರಯಾನ-3'ರ ಯಶಸ್ವಿನ ರೂವಾರಿಗಳಾದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಎಸ್. ಸೋಮನಾಥ್ ಅವರನ್ನು ಆರೆಸ್ಸೆಸ್‌ನ ಸರಕಾರ್ಯವಾಹ ದತ್ತಾತ್ರೆಯ ಹೊಸಬಾಳೆ ಅವರು ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ಜುಲೈ 19 ರಂದು ಅಭಿನಂದಿಸಿದರು. ಈ ಸಂದರ್ಭ ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷ ಎಂ.ಪಿ. ಕುಮಾರ್ ಉಪಸ್ಥಿತರಿದ್ದರು.


ಸಂಪುಟ : 45 | ಸಂಚಿಕೆ : 8 | ಅಧಿಕ ಶ್ರಾವಣ-ನಿಜಶ್ರಾವಣ | ಕಲಿಯುಗಾಬ್ದ 5125 | 01-08-2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪಾತ್ರ

ಭಾರತದಲ್ಲಿ ಸ್ವಾತಂತ್ರ್ಯದ ಗಂಗೆಯನ್ನು ಹರಿಸುವುದಕ್ಕಾಗಿ ಸಾವಿರಾರು ತೊರೆಗಳು ತಮ್ಮನ್ನು ತಾವು ಸಮರ್ಪಿಸಿಕೊಂಡಿವೆ. ಆದರೆ ಎಲ್ಲಾ ತೊರೆಗಳಿಗೂ ಸಮಾನವಾದ ಮಹತ್ವವನ್ನು ಕಟ್ಟಿಕೊಡುವುದರಲ್ಲಿ ಭಾರತೀಯರಾದ ನಾವು ಸೋತಿದ್ದೇವೆ! ಇದರ ಪರಿಣಾಮವಾಗಿ ಅನೇಕ ಸ್ವಾತಂತ್ರ್ಯ ಹೋರಾಟಗಳು, ಮಹಾನ್ ಪುರುಷರು ಹಾಗೂ ಸಂಘಟನೆಗಳ ಸ್ವಾತಂತ್ರ್ಯ ಹೋರಾಟದಲ್ಲಿನ ಪಾತ್ರವನ್ನು ನಗಣ್ಯವೆಂದೂ ಹಾಗೂ ಅತಿರೇಕದ ನಿಲುವಾಗಿ ಸ್ವಾತಂತ್ರ್ಯ ಹೋರಾಟಗಳನ್ನು ದಂಗೆ ಎಂದೂ, ಸ್ವಾತಂತ್ರ್ಯವೀರರನ್ನು ಮತ್ತು ಕೆಲವು ಸಂಘಟನೆಗಳನ್ನು 'ಹೇಡಿ', 'ಬ್ರಿಟೀಷರ ಏಜೆಂಟರು' ಎಂಬಿತ್ಯಾದಿ ಆಖ್ಯಾನಗಳನ್ನು ರಚಿಸಲಾಗಿದೆ ಮತ್ತು ಇಂದಿಗೂ ಹಾಗೆಯೇ ಚಿತ್ರಿಸಲಾಗುತ್ತಿದೆ.

ಆ ಆಖ್ಯಾನಗಳ ಭಾಗವಾಗಿ 1925ರಲ್ಲಿ ಸ್ಥಾಪನೆಗೊಂಡ ಹಾಗೂ ಇಂದು ಜಗತ್ತಿನ ಅತ್ಯಂತ ಬೃಹತ್ ಸ್ವಯಂಸೇವಕ ಸಂಘಟನೆಯಾಗಿ ಬೆಳೆದಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ವಾತಂತ್ರ್ಯ ಹೋರಾಟಕ್ಕೆ ಏನೂ ಕೊಡುಗೆ ನೀಡಿಲ್ಲ ಎನ್ನುವ ತಥಾಕಥಿತ ಆರೋಪ ಮಾಡಲಾಗುತ್ತಿದೆ. ಆಖ್ಯಾನಗಳ ಯುಗದಲ್ಲಿ ಎಲ್ಲಾ ಆಖ್ಯಾನಗಳು ಸತ್ಯವೇ ಆಗಿರಬೇಕೆಂದೇನಿಲ್ಲ. ಸುಳ್ಳನ್ನೇ ಪದೇ ಪದೇ ಹೇಳಿ ಸತ್ಯವೆಂದು ಬಿಂಬಿಸುವ ಪ್ರಯತ್ನ ನಿರಂತರವಾಗಿ ಈ ನಾಡಿನಲ್ಲಿ ಬೆಳೆದುಬಂದಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಆರ್‌ಎಸ್‌ಎಸ್ ಪಾತ್ರದ ಕುರಿತಾದ ಆಖ್ಯಾನ ಕೂಡ ಟೊಳ್ಳು ಎನ್ನುವುದನ್ನು ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಸ್ಪಷ್ಟವಾಗುತ್ತದೆ.



**ಸಂಘಸಂಸ್ಥಾಪಕ ಡಾ. ಹೆಡಗೇವಾರ್ ಅಪ್ರತಿಮ ಕ್ರಾಂತಿಕಾರಿ:** ಸಂಘ ಸಂಸ್ಥಾಪಕರಾದ ಡಾ.ಕೇಶವ ಬಲಿರಾಮ ಹೆಡಗೇವಾರರಿಗೆ ದೇಶಭಕ್ತಿ ರಕ್ತಗತವಾಗಿತ್ತು. ಯುಗಾಂತರ, ಅನುಶೀಲನ ಸಮಿತಿಯಂತಹ ಕ್ರಾಂತಿಕಾರಿ ಸಂಘಟನೆಗಳ ಭಾಗವಾಗಿದ್ದ ಮೊದಲ ದರ್ಜೆಯ ಕ್ರಾಂತಿಕಾರಿಯಾಗಿದ್ದ ಅವರು ಪಾಂಡುರಂಗ ಖಾನಖೋಜೇ, ಅರವಿಂದ ಘೋಷ್, ವಾರೀಂದ್ರ ಘೋಷ್, ತ್ರೈಲೋಕ್ಯನಾಥ ಚಕ್ರವರ್ತಿ ಮೊದಲಾದವರ ಸಹವರ್ತಿಗಳಾಗಿ ಕಾರ್ಯ ನಿರ್ವಹಿಸಿದ್ದವರು. ಕಲ್ಕತ್ತೆಯಲ್ಲಿ ವ್ಯಾಸಂಗ ಮುಗಿಸಿ ನಾಗಪುರಕ್ಕೆ ಬಂದ ಡಾಕ್ಟರ್‌ಜಿ ನಾಗಪುರ ಮತ್ತು ಬಂಗಾಳ ನಡುವಿನ ಕ್ರಾಂತಿಕಾರ್ಯ ಮಹತ್ವದ ಕೊಂಡಿಯಾಗಿ ಕಾರ್ಯನಿರ್ವಹಿಸಿದ್ದರು. ಸಂಘಸ್ಥಾಪನೆಗೂ ಮುನ್ನ ಬಂಗಾಳದಿಂದ ಅವರ ಬಳಿಗೆ ಎಷ್ಟೋ ಸಲ ಸುಸ್ಥಿತಿಯ ಮತ್ತು ರಿಪೇರಿಗಾಗಿ ಪಿಸ್ತೂಲುಗಳು ಬರುತ್ತಿದ್ದವು ಹಾಗೂ ನಾಗಪುರದಿಂದ ಅವರ ಮೂಲಕವೇ ಮರಳುತ್ತಿದ್ದವು. ಈ ಎಲ್ಲಾ ಕಾರ್ಯಗಳು ಸದಾ ಅವರ ಹಿಂದೆ ಇರುತ್ತಿದ್ದ ಪೊಲೀಸ್ ಗುಪ್ತಚರರ ನಡುವೆಯೂ ನಡೆಯುತ್ತಿದ್ದವು!


> "ಶ್ರೀ ದಾದಾಸಾಹೇಬ್‌ಬುಟಿಯವರಿಂದ ಆರ್ಥಿಕ ಸಹಾಯ ಪಡೆದು ಆರೆಸ್ಸೆಸ್ ಸಂಸ್ಥಾಪಕರಾದ ಕೇಶವರಾವ್ ಹೆಡಗೇವಾರ್ ಅವರನ್ನು ವಿದ್ಯಾಭ್ಯಾಸಕ್ಕಿಂತಲೂ ಮುಖ್ಯವಾಗಿ ಪುಲಿನಬಿಹಾರಿದಾಸ್ ಅವರ ನೇತೃತ್ವದಲ್ಲಿ ಕ್ರಾಂತಿಕಾರಿ ಸಂಘಟನೆಯ ಶಿಕ್ಷಣ ಪಡೆಯಲು ಕಳಿಸಲಾಯಿತು. ವಿದ್ಯಾರ್ಥಿ ದೆಸೆಯಲ್ಲೇ ಆಂಗ್ಲರ ವಿರುದ್ಧದ ತನ್ನ ಹೋರಾಟ ಪ್ರವೃತ್ತಿಯಿಂದಾಗಿ ಗುಪ್ತಚರರ ಪೀಡೆಯನ್ನು ಬೆನ್ನಿಗಂಟಿಸಿಕೊಂಡಿದ್ದ ಕೇಶವರಾವ್, ಕಲ್ಕತ್ತೆಯ ವೈದ್ಯ ಶಿಕ್ಷಣದ ದಿನಗಳಲ್ಲೂ ತಮ್ಮದೇ ಕೋಣೆಯಲ್ಲಿ ಅಂಥೊಬ್ಬ ಗುಪ್ತಚರನಿರುತ್ತಲೇ ಕ್ರಾಂತಿಕಾರ್ಯದಲ್ಲಿ ತೊಡಗಿದರು. ಅಸಾಧ್ಯವೆನಿಸಬಲ್ಲ ಇಂಥ ಸಾಹಸವನ್ನು ಅವರು ಲೀಲಾಜಾಲವಾಗಿ ನಿರ್ವಹಿಸುತ್ತಿದ್ದರು."
>
> – ಖ್ಯಾತ ಕ್ರಾಂತಿಕಾರಿ ರಾಮಲಾಲ ವಾಜಪೇಯಿಯವರು ತಮ್ಮ ಆತ್ಮಚರಿತ್ರೆಯಲ್ಲಿ ದಾಖಲಿಸಿದ ಅಂಶ.



ಭಯ್ಯಾಜಿ ದಾಣಿ | ಬಾಳಾಸಾಹೇಬ್ ದೇಶಪಾಂಡೆ

**ಸಂಘದ ಧ್ಯೇಯವೇ ಸ್ವರಾಜ್ಯವಾಗಿತ್ತು:** 1925ರ ವಿಜಯದಶಮಿಯಂದು ಸಂಘವನ್ನು ಸ್ಥಾಪಿಸಿದಾಗಿನಿಂದಲೂ ಡಾ. ಹೆಡಗೇವಾರ್ ಅವರ ಉದ್ದೇಶ ಸ್ವರಾಜ್ಯವೇ ಆಗಿತ್ತು. ಸಂಘದ ಸ್ವಯಂಸೇವಕರಿಗೆ ನೀಡಲಾಗುತ್ತಿದ್ದ ಪ್ರತಿಜ್ಞೆ – "ದೇಶಕ್ಕೆ ಸ್ವಾತಂತ್ರ್ಯ ದೊರಕಿಸಲು ತನು-ಮನ-ಧನದಿಂದ ಪ್ರಾಮಾಣಿಕವಾಗಿ ಜೀವನಪರ್ಯಂತ ಪ್ರಯತ್ನಿಸುತ್ತೇನೆ" ಎನ್ನುವುದಾಗಿತ್ತು. (ಸ್ವಾತಂತ್ರ್ಯದ ನಂತರ "ಹಿಂದೂ ರಾಷ್ಟ್ರದ ಸರ್ವಾಂಗೀಣ ಉನ್ನತಿಯನ್ನು ಮಾಡುವುದಕ್ಕಾಗಿ ನಾನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಘಟಕನಾಗಿದ್ದೇನೆ" ಎಂದು ಪುನರ್‌ರಚಿತವಾಯಿತು.) ಇದರ ಆಧಾರದಲ್ಲೇ ಸಂಘದ ಸ್ವಯಂಸೇವಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಕೈಲಾದ ಪಾತ್ರವನ್ನು ನಿರ್ವಹಿಸತೊಡಗಿದ್ದರು. ಸಂಘದ ಪ್ರಭಾವದಿಂದ 1926-27ರಲ್ಲಿ ನಾಗಪುರದ ಭೋಸಲೆ – ವೇದ ಶಾಲೆಯಲ್ಲಿ ಓದುತ್ತಿದ್ದ ಪ್ರಸಿದ್ಧ ಕ್ರಾಂತಿಕಾರಿ ರಾಜಗುರು ಅವರು ಸ್ವಯಂಸೇವಕರಾದರು. ಭಗತ್‌ಸಿಂಗ್ ಅವರು ಕೂಡ ಡಾಕ್ಟರ್ ಜಿ ಅವರನ್ನು ನಾಗಪುರದಲ್ಲಿ ಭೇಟಿಯಾಗಿದ್ದರು.

**ಸಂಘದ ಶಾಖೆಗಳಲ್ಲಿ ಪೂರ್ಣ ಸ್ವರಾಜ್ಯ ಆಚರಣೆ:** 1929ರ ಡಿಸೆಂಬರ್ 31ರಂದು ಲಾಹೋರ್‌ನಲ್ಲಿ ಕಾಂಗ್ರೆಸ್ ಪ್ರಥಮ ಬಾರಿಗೆ ಸಂಪೂರ್ಣ ಸ್ವರಾಜ್ಯಗಳಿಸುವ ಗುರಿಯನ್ನು ಪ್ರಕಟಿಸಿತು. 1930ರ ಜನವರಿ 26ನ್ನು ಸ್ವಾತಂತ್ರ್ಯ ದಿನವನ್ನಾಗಿ ದೇಶಾದ್ಯಂತ ಆಚರಿಸಲು ನಿರ್ಧಾರ ಮಾಡಲಾಯಿತು. ಆದರೆ ಇದಕ್ಕೆ ಹತ್ತು ವರ್ಷ ಮುಂಚೆಯೇ 1920ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಡಾ॥ ಹೆಡಗೇವಾರ್ ಅವರು ಸಂಪೂರ್ಣ ಸ್ವಾತಂತ್ರ್ಯದ ಕುರಿತು ಪ್ರಸ್ತಾವನೆಯನ್ನು ಮಂಡಿಸಿದ್ದರು. ಆದರೆ ಆ ಪ್ರಸ್ತಾವನೆಗೆ ಬೆಂಬಲ ದೊರಕಿರಲಿಲ್ಲ. ಸಂಪೂರ್ಣ ಸ್ವರಾಜ್ಯದಂತಹ ಸರಿಯಾದ ಗುರಿಯನ್ನು ಕಾಂಗ್ರೆಸ್ ತಡವಾಗಿಯಾದರೂ ಸ್ವೀಕರಿಸಿದ್ದರಿಂದ ಸಂತೋಷಗೊಂಡ ಡಾಕ್ಟರ್‌ಜಿ ಅವರು 1930ರ ಜನವರಿ 26ರ ಭಾನುವಾರದಂದು ಸ್ವಾತಂತ್ರ್ಯ ದಿನ ಆಚರಿಸುವಂತೆ ಸಂಘದ ಎಲ್ಲಾ ಶಾಖೆಗಳಿಗೆ ಸೂಚನಾಪತ್ರ ಕಳುಹಿಸಿದರು. ಈ ಪತ್ರದ ಅನುಸಾರ ಸಂಘದ ಎಲ್ಲಾ ಶಾಖೆಗಳಲ್ಲಿ ಸಂಜೆ 6 ಗಂಟೆಗೆ ರಾಷ್ಟ್ರಧ್ವಜ ವಂದನೆ ನಡೆಸಿ, 'ಸ್ವಾತಂತ್ರ್ಯದ ಕಲ್ಪನೆ ಮತ್ತು ಅವಶ್ಯಕತೆ' ಕುರಿತಂತೆ ಉಪನ್ಯಾಸ ನಡೆಸಲಾಯಿತು.




**ಜಂಗಲ್ ಸತ್ಯಾಗ್ರಹ:** ಎಂಟು ವರ್ಷಗಳ ಬಳಿಕ ಗಾಂಧೀಜಿ 1930ರ ಎಪ್ರಿಲ್ 6 ರಂದು ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸುವ ಮೂಲಕ ಜನಾಂದೋಲನವನ್ನು ಆರಂಭಿಸಿದರು. ಈ ವೇಳಗಾಗಲೇ ಮಧ್ಯಭಾರತದಲ್ಲಿ ಸಂಘದ ಪ್ರಭಾವಲಯ ಹಿಗ್ಗಿತ್ತು. ಸಂಘ ಉಪ್ಪಿನ ಕಾನೂನು ಭಂಗದ ಬದಲು ಜಂಗಲ್ ಸತ್ಯಾಗ್ರಹ ನಡೆಸಲು ನಿರ್ಧರಿಸಿತು. ಆಗ ಡಾ. ಹೆಡಗೇವಾರ್ ಸಂಘದ ಜವಾಬ್ದಾರಿಯನ್ನು ಡಾ. ಪರಾಂಜಪೆಯವರಿಗೆ ವಹಿಸಿ, 11 ಮಂದಿ ಸ್ವಯಂಸೇವಕರೊಂದಿಗೆ ಸತ್ಯಾಗ್ರಹಕ್ಕಾಗಿ ಸ್ವತಃ ಧಾವಿಸಿದರು. ಹೆಡಗೇವಾರರಿಗೆ 11 ತಿಂಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲಾಯಿತು ಉಳಿದ 11 ಜನರಿಗೆ 4 ತಿಂಗಳ ಸೆರೆವಾಸ.! ಇವರಲ್ಲಿ ಅಪ್ಪಾಜಿ ಜೋಶಿ (ನಂತರ ಸರಕಾರ್ಯವಾಹರಾದವರು), ದಾದಾರಾವ್ ಪರಮಾರ್ಥ (ನಂತರ ಮದ್ರಾಸ್‌ನಲ್ಲಿ ಪ್ರಥಮ ಪ್ರಾಂತ ಪ್ರಚಾರಕರಾದವರು), ಮುಂದೆ ಅಖಿಲ ಭಾರತೀಯ ಶಾರೀರಿಕ ಶಿಕ್ಷಣ ಪ್ರಮುಖರಾದ (ಸರ ಸೇನಾಪತಿ) ಮಾರ್ತಾಂಡ ರಾವ್ ಜೋಗ್, ನಾಗಪುರದ ಜಿಲ್ಲಾ ಸಂಘಚಾಲಕ ಅಪ್ಪಾಜಿ ಹಳ್ದೆ, ಮೊದಲಾದ ಕಾರ್ಯಕರ್ತರು ಹಾಗೂ ಸ್ವಯಂಸೇವಕರ ತಂಡಗಳು ಕೂಡ ಸತ್ಯಾಗ್ರಹದಲ್ಲಿ ಪಾಲ್ಗೊಂಡವು. ಸತ್ಯಾಗ್ರಹದ ಸಂದರ್ಭದಲ್ಲಿ ಪೊಲೀಸರ ಹಿಂಸೆಗೆ ಒಳಗಾಗುವ ಸತ್ಯಾಗ್ರಹಿಗಳ ಸುರಕ್ಷತೆಗಾಗಿ 100 ಜನ ಸ್ವಯಂಸೇವಕರನ್ನೊಳಗೊಂಡ ತಂಡವನ್ನು ರಚಿಸಲಾಗಿತ್ತು. ಇದರ ಸದಸ್ಯರು ಸತ್ಯಾಗ್ರಹದ ವೇಳೆ ಉಪಸ್ಥಿತರಿರುತ್ತಿದ್ದರು.



**ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ಮತ್ತು ಸ್ವಯಂಸೇವಕರು:** 1928ರ ಡಿಸೆಂಬರ್‌ನಲ್ಲಿ ಸ್ಯಾಂಡರ್ಸ್ ಸಂಹಾರಗೈದವರಲ್ಲಿ ರಾಜಗುರು ಮತ್ತು ಭಗತ್ ಸಿಂಗ್‌ಗೆ ಆಶ್ರಯ ನೀಡಿದವರು ಡಾಕ್ಟರ್ ಜಿ. ನಂತರದ ದಿನಗಳಲ್ಲಿ ರಾಜಗುರು ಅವರಿಗೆ ಸಂಘದ ಅಂದಿನ ಅಖಿಲ ಭಾರತೀಯ ಸರಕಾರ್ಯವಾಹರಾಗಿದ್ದ ಭಯ್ಯಾಜಿ ದಾಣಿ ಅವರ ನಾಗ್ಪುರದ ಹೊಲದಲ್ಲಿ ಅಡಗಲು ವ್ಯವಸ್ಥೆ ಮಾಡಿದ್ದರು. 1932ರ ಜನವರಿಯಲ್ಲಿ ಕ್ರಾಂತಿಕಾರಿ ಸಂಘಟನೆಯಿಂದ ಸರಕಾರಿ ಖಜಾನೆಯನ್ನು ಲೂಟಿ ಮಾಡಲು ನಡೆದ ಬಾಲಾ ಘಾಟ್ ಕಾಂಡದಲ್ಲಿ ವೀರ ಬಾಘಾ ಜತಿನ್ ತಮ್ಮ ಸಂಗಡಿಗರೊಂದಿಗೆ ಹುತಾತ್ಮರಾದರು. ಬಾಲಾಜಿ ಹುದ್ದಾರ್ ಮೊದಲಾದ ಕ್ರಾಂತಿಕಾರಿಗಳನ್ನು ಈ ಘಟನೆಯಲ್ಲಿ ಬಂಧಿಸಲಾಯಿತು. ಬಾಲಾಜಿ ಹುದ್ದಾರ್ ಆಗ ಸಂಘದ ಅಖಿಲ ಭಾರತೀಯ ಸರಕಾರ್ಯವಾಹರಾಗಿದ್ದರು. ಸ್ವಾತಂತ್ರ್ಯ ಸೇನಾನಿಗಳಿಗೆ ಸದಾ ನೆರವಾಗಿದ್ದಿದ್ದಲ್ಲದೇ ತನ್ನ ಕಾರ್ಯದ ಮೂಲಕ ಸಂಘ ಗಾಂಧೀಜಿ, ಡಾ.ಬಿ.ಆರ್. ಅಂಬೇಡ್ಕರ್, ಮದನಮೋಹನ ಮಾಳವೀಯ, ಸುಭಾಷ್‌ಚಂದ್ರಬೋಸ್ ಮುಂತಾದ ಸ್ವಾತಂತ್ರ್ಯ ಸೇನಾನಿಗಳ ಮೆಚ್ಚುಗೆಗೆ ಪಾತ್ರವಾಗಿತ್ತು.


**ಬ್ರಿಟೀಷರಿಂದ ವಿರೋಧ:** 1932ರ ಡಿಸೆಂಬರ್ 15ರಂದು ಮಧ್ಯಭಾರತ ಸರಕಾರವು(ನಾಗಪುರವನ್ನು ಒಳಗೊಂಡಿತ್ತು) ಸಂಘದ ಕುರಿತು ಗುಪ್ತಚರ ವಿಭಾಗದ ವರದಿಯನ್ನು ಆಧರಿಸಿ ಸರಕಾರಿ ನೌಕರರು ಸಂಘದಲ್ಲಿ ಪಾಲ್ಗೊಳ್ಳುವುದರ ಮೇಲೆ ನಿಷೇಧ ಹೇರಿತು. ಬ್ರಿಟಿಷರ ಏಜಂಟರಾಗಿದ್ದರೆ ನಿಷೇಧವನ್ನು ಹೇರುವ ಅಗತ್ಯತೆ ಏನಿತ್ತು? ವಿಪರ್ಯಾಸದ ಸಂಗತಿ ಎಂದರೆ ಸಂಘದ ಮೇಲಿನ ನಿಷೇಧವನ್ನು ಅಂದಿನ ಕಾಂಗ್ರೆಸ್ ವಿರೋಧಿಸಿತ್ತು! ಕಾನೂನು ರದ್ದಾಗಿ ಸಂಘ ವಿಜಯಿಯಾಗುವಲ್ಲಿ ಪಾತ್ರವಹಿಸಿತ್ತು.

**1942ರ ಭಾರತ ಬಿಟ್ಟು ತೊಲಗಿ ಆಂದೋಲನ:** ಗಾಂಧೀಜಿಯವರೇ ಮಾಡು ಇಲ್ಲವೇ ಮಡಿ ಎಂಬ ಧ್ಯೇಯದಡಿಯಲ್ಲಿ ಶುರು ಮಾಡಿದ ಜನಾಂದೋಲನ ಭಾರತ ಬಿಟ್ಟು ತೊಲಗಿ ಆಂದೋಲನ. ಆದರೆ ಆಂದೋಲನದ ಆರಂಭದಲ್ಲೇ ನಾಯಕರುಗಳು ಬಂಧನಕ್ಕೆ ಒಳಗಾಗಿ, ಅನೇಕ ನಾಯಕರು ಅಂತರ್ಗತರಾಗಿ ಕಾರ್ಯನಿರ್ವಹಿಸಬೇಕಾದ ಸನ್ನಿವೇಶ ಎದುರಾದಾಗ, ಬಂಧಿತ ನಾಯಕರ ಸ್ಥಾನ ತುಂಬಿದ ಅರುಣಾ ಅಸಫ್ ಅಲಿಯಂತಹ ನಾಯಕರಿಗೆ ಬೆಂಬಲವಾಗಿ ನಿಂತಿದ್ದು, ಅವರಿಗೆ ಆಶ್ರಯ ನೀಡಿದ್ದು ಇದೇ ಆರ್‌ಎಸ್‌ಎಸ್ ಸ್ವಯಂಸೇವಕರು. ಇದರಲ್ಲಿ ಭಾಗವಹಿಸಿದ ಸ್ವಯಂಸೇವಕ ಬಾಳಾಸಾಹೇಬ್ ದೇಶಪಾಂಡೆಯವರಿಗೆ ಮರಣದಂಡನೆ ವಿಧಿಸಲಾಗಿತ್ತು, ಆದರೆ ವಿರೋಧದ ನಂತರ ಬಿಡುಗಡೆ ಮಾಡಲಾಯಿತು.

2ನೇ ಪುಟಕ್ಕೆ...

# ಸಂಸ್ಮರಣೆ ರವೀಂದ್ರನಾಥ ಟಾಗೋರ್

**(7ನೇ ಮೇ 1861 – 7ನೇ ಆಗಸ್ಟ್ 1941)**



ಟಾಗೋರರು ನಮ್ಮ ಭಾರತದ ಪುಣ್ಯ ನೆಲದಲ್ಲಿ ಜನಿಸಿ ಇಂದು ಇಡೀ ಜಗತ್ತು ಗೌರವಿಸುವ ಒಬ್ಬ ಮಹತ್ವದ ಕವಿಯಾಗಿ ಉಳಿದುಕೊಂಡಿರುವುದು ನಮ್ಮ ಹೆಮ್ಮೆ. ಒಬ್ಬ ಬಂಗಾಳ ಮೂಲದ ಹುಡುಗ ಕವಿಯಾಗಿ, ಕಾದಂಬರಿಕಾರನಾಗಿ, ನಾಟಕಕಾರನಾಗಿ, ಸಂಗೀತಗಾರನಾಗಿ ಹಾಗೂ ಬಹುಭಾಷಾ ವಿದ್ವಾಂಸನಾಗಿ ಬೆಳೆದು ವಿಶ್ವದ ಅತ್ಯುನ್ನತ ಪ್ರಶಸ್ತಿಯಾದ ನೊಬೆಲ್ ಸಾಹಿತ್ಯ ಪ್ರಶಸ್ತಿಯನ್ನು ಪಡೆಯುವಷ್ಟರ ಮಟ್ಟಿಗೆ ಸಾಧಿಸುತ್ತಾನೆ ಎಂದರೆ ಅದು ಸುಲಭದ ವಿಷಯವಲ್ಲ. ಹಾಗಾಗಿ ನಾವು ಟಾಗೋರ್ ಅವರನ್ನು ಅಭಿಜಾತ ಪ್ರತಿಭೆ ಎಂದು ಉತ್ಪ್ರೇಕ್ಷೆ ಇಲ್ಲದೆ ಕರೆಯಬಹುದು.

**ಬಾಲ್ಯ:** ಟಾಗೋರ್ ಅವರು ಸಾಮಾನ್ಯ ಬ್ರಾಹ್ಮಣ ಕುಟುಂಬದಲ್ಲಿ ಮೇ 7, 1861 ರಲ್ಲಿ ಬಂಗಾಳದಲ್ಲಿ ಜನಿಸಿದರು. ತಂದೆ ದೇಬೆಂದ್ರನಾಥ ಟಾಗೋರ್ ತಾಯಿ ಶಾರದಾದೇವಿ. ಟಾಗೋರರು ಕಿರಿಯ ಪ್ರಾಯದಲ್ಲಿಯೇ ಅಧ್ಯಯನ ಶೀಲತೆಯನ್ನು ಮೈಗೂಡಿಸಿಕೊಂಡಿದ್ದವರು. ಅದ್ಭುತ ಎಂಬಂತೆ ತಮ್ಮ ಎಂಟನೇ ವಯಸ್ಸಿನಲ್ಲಿಯೇ ಹದವರಿತ ಮತ್ತು ಅರ್ಥಗರ್ಭಿತವಾದ ಪದ್ಯಗಳನ್ನು ರಚಿಸಲು ಪ್ರಾರಂಭಿಸಿದ್ದರು. 16ನೇ ವಯಸ್ಸಿನಲ್ಲಿ ರವೀಂದ್ರರು "ಭಾನುಸಿಂಹೋ" ಎಂಬ ಮಹತ್ವದ ಕವಿತೆಯನ್ನು ಬಂಗಾಳ ಭಾಷೆಯಲ್ಲಿ ಪ್ರಕಟಿಸಿದರು.

**ಬಹುಮುಖ ಪ್ರತಿಭೆ:** ಟಾಗೋರರು ಕೇವಲ ಕವಿತೆಗಳನ್ನಷ್ಟೇ ಅಲ್ಲದೆ ಸಣ್ಣ ಕಥೆ, ಕಾದಂಬರಿ, ನಾಟಕ ಮತ್ತು ವಿದ್ವತ್ಪೂರ್ಣವಾದ ಗ್ರಂಥ ಮಾಲೆಗಳನ್ನು ಬರೆದು ಪ್ರಕಟಿಸಿದರು. ರವೀಂದ್ರನಾಥ ಟಾಗೋರ್ ಅವರನ್ನು ಒಂದು ಪ್ರತಿಭೆಯಿಂದ ಗುರುತಿಸಲಾಗದು. ಜಗತ್ತಿನ ಅತ್ಯದ್ಭುತವಾದ ಪುಸ್ತಕಗಳನ್ನೆಲ್ಲ ಓದಿಕೊಂಡಿದ್ದ ಅವರು ಲಂಡನ್‌ನಲ್ಲಿ ಕಾನೂನು ಪದವಿಯನ್ನು ಪಡೆದಿದ್ದರು. ಆದರೆ ಅವರು ವಕೀಲಿ ವೃತ್ತಿಯನ್ನು ಪಕ್ಕಕ್ಕಿಟ್ಟು ಬೇರೆ ಸೃಜನಶೀಲ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದೇ ಹೆಚ್ಚು. ಈಗಾಗಲೇ ಹೇಳಿದಂತೆ ಅವರು ಹೃದಯಸ್ಪರ್ಶಿಯಾಗಿ ಬರೆಯುತ್ತಿದ್ದರು. ತಮ್ಮದೇ ಪದ್ಯಗಳಿಗೆ ಸಂಗೀತ ಸಂಯೋಜನೆ ಮಾಡಿ ಮಧುರವಾಗಿ ಹಾಡುತ್ತಿದ್ದರು. ಸಾಕಷ್ಟು ವಿಷಯಗಳ ಬಗ್ಗೆ ತತ್ವಜ್ಞಾನಿಗಳಂತೆ ನಿರರ್ಗಳವಾಗಿ ಮಾತನಾಡುತ್ತಿದ್ದರು. ಒಟ್ಟಾರೆ ಅವರು ಸದಾ ಹರಿಯುವ ತೊರೆಯಂತೆ ಹೊಸತನಕ್ಕೆ ತುಡಿಯುತ್ತಿದ್ದರು.

**ಸ್ವಾತಂತ್ರ್ಯದ ಕಿಚ್ಚು ಹೊತ್ತಿಸಿದ್ದ ಟಾಗೋರ್:** ಟಾಗೋರ್ ಅವರು ಬ್ರಿಟಿಷ್ ಸಾರ್ವಭೌಮತ್ವವನ್ನು ಧಿಕ್ಕರಿಸಿದ ಪ್ರಬಲ ರಾಷ್ಟ್ರೀಯತಾವಾದಿ. ಸ್ವಾತಂತ್ರ್ಯ ಚಳುವಳಿಗೆ ಪ್ರೇರೇಪಿಸುವ ಕ್ರಾಂತಿಕಾರಿ ಗೀತೆಗಳನ್ನು ಬರೆದ ಕರಪತ್ರಗಳನ್ನು ಟಾಗೋರ್ ಅವರು ಹಂಚಿದ್ದರು. ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿರೋಧಿಸಿ ತಮಗೆ ಬ್ರಿಟಿಷ್ ಸರ್ಕಾರ ನೀಡಿದ್ದ ನೈಟ್ ಹುಡ್ ಪದವಿಯನ್ನು ಮುಲಾಜಿಲ್ಲದೆ ತ್ಯಜಿಸಿದ್ದರು. ಇಳಿ ವಯಸ್ಸಿನಲ್ಲಿಯೂ ಅವರಲ್ಲಿ ಬ್ರಿಟಿಷರ ಮೇಲೆ ರೋಶಾಗ್ನಿ ಇತ್ತು. ಭಾರತೀಯರ ಎದೆಯಲ್ಲಿ ಸ್ವಾತಂತ್ರದ ಬೀಜ ಬಿತ್ತುವ ಹುಮ್ಮಸ್ಸಿತ್ತು.

**ಸಾಹಿತ್ಯ:** ಟಾಗೋರ್ ಅವರ ಪದ್ಯಗಳು ಬಂಗಾಳ ಅಷ್ಟೇ ಅಲ್ಲದೆ ಈ ಜಗದ ಅಸಂಖ್ಯಾತ ವ್ಯಕ್ತಿಗಳ ನಾಲಿಗೆಯ ಮೇಲೆ ಜೀವಂತವಾಗಿದೆ. ಲೆಕ್ಕಕ್ಕೆ ಸಿಗದಷ್ಟು ಪುಸ್ತಕಗಳನ್ನು ಬರೆದಿದ್ದ ಟಾಗೋರರಿಗೆ ಭಾರಿ ಮಹತ್ವವನ್ನು ತಂದುಕೊಟ್ಟ ಕೃತಿ "ಗೀತಾಂಜಲಿ". ಭಾರತೀಯ ಸಂಸ್ಕೃತಿಯ ಅಂತರಾತ್ಮವನ್ನು ಶೋಧಿಸಿರುವ ಆ ಕೃತಿ ವಿಶ್ವದ ಸಾಕಷ್ಟು ಭಾಷೆಗೆ ತರ್ಜುಮೆಗೊಂಡು ಕಾವ್ಯ ರಸಿಕರ ಮನಸ್ಸನ್ನು ಸಂಪೂರ್ಣವಾಗಿ ಗೆದ್ದಿದೆ. ಅದೇ ಕೃತಿ 1913 ರಲ್ಲಿ ನೊಬೆಲ್ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡಿತು. ಮಾನಸಿ, ಸೋನಾರ್, ಗಿತಿಮಾಲ್ಯ, ಚಾರ್ ಓಧ್ಯಯ್ ಅವರ ಇತರೆ ಕೃತಿಗಳು.

**ಶಾಂತಿನಿಕೇತನ:** ಶಾಂತಿನಿಕೇತನ ವಿಶ್ವವಿದ್ಯಾನಿಲಯವು ಇಂದು ಭಾರತದ ಪ್ರಮುಖ ವಿಶ್ವವಿದ್ಯಾನಿಲಯಗಳಲ್ಲೊಂದು. ಶಾಂತಿನಿಕೇತನವನ್ನು ಮುನ್ನಲೆಗೆ ತಂದು ಅದಕ್ಕೊಂದು ವಿಶಿಷ್ಟ ಕಳೆಯನ್ನು ತಂದು ಕೊಟ್ಟವರು ಟಾಗೋರ್ ಅವರು. ಸದ್ಯ ಪಶ್ಚಿಮ ಬಂಗಾಳದಲ್ಲಿರುವ ಆ ವಿಶ್ವವಿದ್ಯಾನಿಲಯದಲ್ಲಿ ಇಂದಿರಾ ಗಾಂಧಿ, ಸತ್ಯಜಿತ್ ರೇ, ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಅಮರ್ತ್ಯಸೇನ್ ಸೇರಿದಂತೆ ಹಲವಾರು ಪ್ರಭಾವಿ ವ್ಯಕ್ತಿಗಳು ತಮ್ಮ ವಿದ್ಯಾಭ್ಯಾಸ ನಡೆಸಿದ್ದರು. ಟಾಗೋರರು ತಮ್ಮ ಕಲ್ಪನೆಯ ವಾತಾವರಣವನ್ನು ವಿಶ್ವವಿದ್ಯಾಲಯದಲ್ಲಿ ನಿರ್ಮಿಸಿ ವಿದ್ಯಾರ್ಥಿಗಳ ಓದಿಗೆ ಅನುವು ಮಾಡಿಕೊಟ್ಟಿದ್ದರು.

ಸಾಧನೆಯನ್ನೇ ದಾಹವಾಗಿಸಿಕೊಂಡಿದ್ದ ಮತ್ತು ಸ್ಫೂರ್ತಿಯ ಸೆಲೆಯಂತಿದ್ದ ಹೃದಯ ವೈಶಾಲ್ಯತೆಯ ವ್ಯಕ್ತಿ ರವೀಂದ್ರನಾಥ ಟಾಗೋರರು 7 ಆಗಸ್ಟ್ 1941 ರಂದು ಕಲ್ಕತ್ತಾದಲ್ಲಿ ಕೊನೆಯುಸಿರೆಳೆದರು. ಬಿಳಿ ಗಡ್ಡಧಾರಿ, ಸಂತ ಸ್ವರೂಪಿ ಮಂದಸ್ಮಿತ ಮುಖದ ಟ್ಯಾಗೋರರು ಚಿರಸ್ಥಾಯಿ!

## ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪಾತ್ರ

*1ನೇ ಪುಟದಿಂದ...*

**ಗಾಂಧೀಜಿ, ನೆಹರೂ, ಕಾಂಗ್ರೆಸ್ ಮತ್ತು ಆರ್‌ಎಸ್‌ಎಸ್:**

1. ಗಾಂಧೀಜಿ ಅವರು ದಿಲ್ಲಿಯಲ್ಲಿ ವಾಸವಿರುತ್ತಿದ್ದ ಭಂಗಿ ಓಣಿಯಲ್ಲಿನ ವಾಲ್ಮೀಕಿ ಮಂದಿರದ ಎದುರೇ ಮುಸ್ಲಿಂ ಲೀಗ್‌ನ ದೊಡ್ಡ ಕೇಂದ್ರವಿತ್ತು. ಪೊಲೀಸರ ರಕ್ಷಣೆಯಲ್ಲಿರಲು ಬಯಸದ ಗಾಂಧೀಜಿಯವರ ಮೇಲೆ ಅಲ್ಲಿಂದ ಯಾವಾಗ ಬೇಕಾದರೂ ಆಕ್ರಮಣವಾಗಬಹುದೆಂದು ಗಾಂಧೀಜಿ ಅವರ ನಿಕಟವರ್ತಿ ಮತ್ತು ನಂತರದ ದಿನಗಳಲ್ಲಿ ಸಂಸತ್ ಸದಸ್ಯರಾದ ಶ್ರೀ ಕೃಷ್ಣನ್ ನಾಯರ್ ಅವರು ದಿಲ್ಲಿಯ ಆಗಿನ ಪಾಂತ ಪ್ರಚಾರಕರಾಗಿದ್ದ ವಸಂತರಾವ್ ಓಕ್ ಅವರ ಬಳಿ ಗಾಂಧೀಜಿಯ ರಕ್ಷಣೆಯ ಹೊಣೆಯನ್ನು ಸಂಘವು ಒಪ್ಪಬೇಕೆಂದು ಆಗ್ರಹಿಸಿದರು.
2. ಆಗಿನ್ನೂ ಕಾಂಗ್ರೆಸ್ ದೇಶವಿಭಜನೆಯನ್ನು ಒಪ್ಪಿರಲಿಲ್ಲ. 1946ರಲ್ಲಿ ಸಿಂಧ್‌ನಲ್ಲಿ ನಡೆದ ನೆಹರೂ ಅವರ ಸಭೆಯನ್ನು ಮುಸ್ಲಿಂ ಲೀಗ್‌ನವರು ಭಂಗಗೊಳಿಸುವ ಸಾಧ್ಯತೆ ಇತ್ತು. ಇದರಿಂದಾಗಿ ಆಗಿನ ಕಾಂಗ್ರೆಸ್ ಧುರೀಣರಾದ ಡಾ.ಚಿಮನದಾಸ್ ಮತ್ತು ಬಾಬಾ ಕಿಶನ್‌ಚಂದ ಅವರು ಸಿಂಧ್ ಪ್ರಾಂತ್ಯದಲ್ಲಿ ಬಲಿಷ್ಠವಾಗಿದ್ದ ಸಂಘದ ಸಹಾಯವನ್ನು ಕೋರಿದರು.
3. 1946 ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್‌ನ ಸಮಿಶ್ರ ಸರ್ಕಾರದ ಕೇಂದ್ರೀಯ ಅಸೆಂಬ್ಲಿ ಪ್ರಾರಂಭವಾಯಿತು. ಇದರಲ್ಲಿ ಮುಸ್ಲಿಂ ಲೀಗ್‌ನವರು ಕಲ್ಲೆಸೆದು ಕಾಂಗ್ರೆಸ್ ಧುರೀಣರಿಗೆ ಅವಮಾನ ಎಸಗಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ತಮ್ಮ ಯೋಜನೆ ಸಫಲವಾಗುತ್ತಿದೆ ಎಂದೆನಿಸಿ ಮರುದಿನ ಲೀಗ್‌ನ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದರು. ಈ ಸಂದರ್ಭದಲ್ಲಿ ದಿಲ್ಲಿ ಕಾಂಗ್ರೆಸ್ ಧುರೀಣ ದೇಶಬಂಧು ಗುಪ್ತಾ ಅವರು ಸಂಘ ಕಾರ್ಯಾಲಯಕ್ಕೆ ತೆರಳಿ ಸಂಘದ ಅಧಿಕಾರಿಗಳಲ್ಲಿ ಸಹಾಯವನ್ನು ಯಾಚಿಸಿದರು.


ಈ ಮೂರೂ ಸಂದರ್ಭಗಳಲ್ಲೂ ಸಂಘ ತಕ್ಷಣ ಭದ್ರತೆಯ ದೃಷ್ಟಿಯಿಂದ ನೆರವಿಗೆ ಧಾವಿಸಿ ಅನೇಕ ಅನಾಹುತಗಳನ್ನು ತಡೆಯಲು ಸಹಕಾರಿಯಾಯಿತು.

**ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ 1947ರ ನಂತರವೂ ನಡೆದ ಸಂಘದ ಹೋರಾಟ:** 1947ರಲ್ಲಿ ಸ್ವಾತಂತ್ರ್ಯ ಅಧಿಕೃತವಾಗಿ ನಮ್ಮದಾಗಿಸಿಕೊಂಡ ನಂತರವೂ ಕಾಶ್ಮೀರ, ಹೈದರಾಬಾದ್, ಜುನಾಗಢ ಪ್ರದೇಶಗಳು ಗೊಂದಲದ ಗೂಡಾಗಿತ್ತು ಹಾಗೂ ಗೋವಾ ಪೋರ್ಚುಗೀಸರ ಪಾಲಾಗಿತ್ತು. 1947ರಲ್ಲಿ ಕಾಶ್ಮೀರದ ವಿಲೀನಕ್ಕಾಗಿ ರಾಜ ಹರಿಸಿಂಹನ ಮನವೊಲಿಸಲು ಸರ್ದಾರ್ ಪಟೇಲರು ಮತ್ತು ನೆಹರು ಅವರಿಗೇ ಸಾಧ್ಯವಾಗದಿದ್ದಾಗ ಅವರು ಮೊರೆ ಹೋಗಿದ್ದು ಆಗಿನ ಸಂಘದ ಸರಸಂಘಚಾಲಕರಾದ ಶ್ರೀ ಗುರೂಜಿ ಅವರ ಬಳಿ! ಹೈದರಾಬಾದಿನ ರಜಾಕರರ ವಿರುದ್ಧ ಸಂಘದ ಸ್ವಯಂಸೇವಕರು ಪ್ರಾಣ ಪಣವಾಗಿಟ್ಟು ಹೋರಾಡಿ ಆ ಪ್ರದೇಶವನ್ನು ತಾಯ್ನಾಡಿನಲ್ಲೇ ಉಳಿಸಿದರು. ಅದರ ಶ್ರೇಯಸ್ಸು ಅವರಿಗೇ ಸಲ್ಲಬೇಕು. ಪೋರ್ಚುಗೀಸರ ಹಿಡಿತದಲ್ಲಿದ್ದ ಗೋವಾ ವಿಮೋಚನೆಗಾಗಿ 1950ರ ದಶಕದಲ್ಲೇ ಅತ್ಯಂತ ಪ್ರಖರ ಆಂದೋಲನಗಳು ಪ್ರಾರಂಭವಾಗಿ ಕೊನೆಗೂ ಗೋವಾ ಭಾರತದ್ದೇ ಭಾಗವಾಗುವ ತನಕ ನಡೆದ ಸಮರ್ಪಣೆಯ ಇತಿಹಾಸದಲ್ಲಿ ಸಂಘದ ಪಾತ್ರ ಗುರುತರವಾದದ್ದು. ■

## ದಿ ಅನ್‌ಟೋಲ್ಡ್ ಸ್ಟೋರಿ ಆಫ್ ಕಶ್ಮೀರ್

**ಲೇಖಕರು:** ಸಂತೋಷ್ ಕುಮಾರ್ ಮೆಹೆಂದಳೆ
**ಪ್ರಕಾಶಕರು:** ಸಾಹಿತ್ಯಲೋಕ ಪಬ್ಲಿಕೇಷನ್ಸ್
**ಬೆಲೆ:** 210

ಪುಸ್ತಕ ಪರಿಚಯ




ಕಾಶ್ಮೀರ ಎಂದಾಕ್ಷಣ ನೆನಪಾಗುವುದು ತಾಯಿ ಶಾರದೆಯ ಮೂಲಸ್ಥಾನ ಮತ್ತು ಅಲ್ಲಿಯ ಪ್ರಾಕೃತಿಕ ಸೌಂದರ್ಯ. ಆದರೆ, ರಾಜಕೀಯ ಹಾಗೂ ಧಾರ್ಮಿಕ ಮೂಲಭೂತ ನೆಲೆಗಳಲ್ಲೂ ಕಶ್ಮೀರಿ ಜನಗಳ ಪಾಡು ಅಘೋರವಾದದ್ದು. ಕಾಶ್ಮೀರ ನಿವಾಸಿಗಳು ಎದುರಿಸಿದ ಸಂಕಷ್ಟಗಳತ್ತ "ದಿ ಅನ್‌ಟೋಲ್ಡ್ ಸ್ಟೋರಿ ಆಫ್ ಕಶ್ಮೀರ್" ಓದುಗನ ಚಿತ್ತವನ್ನು ಕೊಂಡೊಯ್ಯುತ್ತದೆ. ಕಶ್ಮೀರ್ ಕಣಿವೆಯಲ್ಲಾದ ಉಗ್ರ ಚಟುವಟಿಕೆಗಳನ್ನು, ಮಾರಣಾಂತಿಕ ಧಾಳಿಯನ್ನು ಇದರ ಪರಿಣಾಮವಾಗಿ ಉಂಟಾದ ಸಾವಿರಾರು ಹಿಂದೂಗಳ ಮಾರಣ ಹೋಮದ ಮುಚ್ಚಿಟ್ಟ ಕಥೆಯನ್ನು ಈ ಕೃತಿಯಲ್ಲಿ ಸವಿವರವಾಗಿ ವಿವರಿಸಲಾಗಿದೆ.

ಪತ್ರಿಕೆಗಳು ಹಾಗೂ ಪತ್ರಕರ್ತರು ಸತ್ಯ ವಿಚಾರಗಳನ್ನು ಬಿಂಬಿಸಬೇಕು. ಆದರೆ ಕಾಶ್ಮೀರ ಮಾರಣಹೋಮದ ಕಾಲಘಟ್ಟದಲ್ಲಿ ಅಲ್ಲಿನ ಪತ್ರಿಕೋದ್ಯಮ ತನ್ನ ಜವಾಬ್ದಾರಿಯನ್ನು ಕಡೆಗಣಿಸಿ, ಕೇಂದ್ರ ಸರಕಾರ ಹೇಳಿದಂತೆ ಕುಣಿಯುವ ಕೈಗೊಂಬೆಯಾಯಿತು. ವಾಸ್ತವ ವಿಚಾರಗಳು ಬೆಳಕಿಗೆ ಬರಲು ದೀರ್ಘ ಸಮಯವನ್ನು ತೆಗೆದುಕೊಂಡವು. ಇಂದಿಗೂ ಸ್ಪಷ್ಟವಾಗಿ ಹೊರಪ್ರಪಂಚಕ್ಕೆ ತಿಳಿದಿರದ, ಕಾಶ್ಮೀರ ಪಂಡಿತರ ನರಮೇಧದ ಕಥೆಯನ್ನು, ಹಿನ್ನೆಲೆಯನ್ನು ಎಳೆ ಎಳೆಯಾಗಿ ಈ ಕೃತಿ ಮುಂದಿಡುತ್ತದೆ.

ವೆಬ್‌ಸೈಟ್: https://amzn.eu/d/8C3uzNZ

ಎಲ್ಲೋ ಕೇಳಿದ ಕಥೆ

## ರಾಜಗುರುವಿಗೆ ಸಹಾಯ

ಬ್ರಿಟಿಷ್ ಅಧಿಕಾರಿ ಸ್ಯಾಂಡರ್ಸ್ನ ಹತ್ಯೆ ಮಾಡಿದ್ದ ಕ್ರಾಂತಿಕಾರಿ ಸರ್ದಾರ್ ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ ತಮ್ಮ ಕಾರ್ಯಾಚರಣೆಯ ನಂತರ ಯಶಸ್ವಿಯಾಗಿ ತಲೆಮರೆಸಿಕೊಂಡು ಕಾಣೆಯಾಗಿದ್ದರು. ಈ ಮೂವರ ಪೈಕಿ ರಾಜಗುರು ತಲೆಮರೆಸಿರುವ ಸಲುವಾಗಿ ಡಾ. ಕೇಶವ ಬಲಿರಾಮ ಹೆಡಗೇವಾರ್‌ರ ಬಳಿ ಆಶ್ರಯಕ್ಕಾಗಿ ಬಂದಿದ್ದರು. ಡಾಕ್ಟರಜಿಗೆ ಭಗತ್‌ಸಿಂಗ್ ಮತ್ತು ರಾಜಗುರು ಇಬ್ಬರಲ್ಲೂ ಪರಿಚಯವಿತ್ತು. ಡಾಕ್ಟರಜಿಯವರ ನಿಕಟವರ್ತಿ ಶ್ರೀ ಭಾಊಜಿ ಕಾವರೆಯವರು ಬದುಕಿದ್ದಾಗ ಭಗತ್‌ಸಿಂಗ್ ಒಮ್ಮೆ ನಾಗಪುರಕ್ಕೆ ಬಂದು ಡಾಕ್ಟರಜಿಯವರನ್ನು ಭೇಟಿಯಾಗಿದ್ದರು. ಈ ಭೇಟಿ ಏರ್ಪಡಿಸುವುದರಲ್ಲಿ ಮುಖ್ಯ ಪಾತ್ರವಿದ್ದುದು ವರ್ಧಾದಲ್ಲಿದ್ದ ಕ್ರಾಂತಿಕಾರಿ ಶ್ರೀ ಗಂಗಾಪ್ರಸಾದ ಪಾಂಡೆಯವರದು.

ಬಾಬಾರಾವ್ ಸಾವರ್ಕರ್‌ರ ಮೂಲಕ ರಾಜಗುರು ಡಾಕ್ಟರಜಿಗೆ ಪರಿಚಯವಾದರು. ಕಾಂಗ್ರೆಸ್‌ನ ಕಲ್ಕತ್ತಾ ಅಧಿವೇಶನಕ್ಕೆ ಡಾಕ್ಟರಜಿ ಹೋಗಿದ್ದಾಗ ಅಲ್ಲಿ ರಾಜಗುರುವಿನ ಪರಿಚಯವನ್ನು ಬಾಬಾರಾವ್ ಡಾಕ್ಟರಜಿಗೆ ಮಾಡಿಸಿದ್ದರು. ಮುಂದೆ ಭೋಂಸ್ಲಾ ವೇದಶಾಲಾದಲ್ಲಿ ಒಂದೆರಡು ವರ್ಷಗಳ ಕಾಲ ತಾನು ವೇದಾಧ್ಯಯನ ಮಾಡುತ್ತಿದ್ದ ಸಂದರ್ಭದಲ್ಲಿ ರಾಜಗುರು ಮೋಹಿತೆಯ ಶಾಖೆಗೂ ಬಂದಿದ್ದರು. ಹೀಗಾಗಿ ಅವರ ಪರಿಚಯ ಡಾಕ್ಟರಜಿಗೆ ಚೆನ್ನಾಗಿ ಇತ್ತು.

ಭೂಗತರಾಗಿ ಇರುವ ಸಲುವಾಗಿ ನಾಗಪುರಕ್ಕೆ ಬಂದಿದ್ದ ರಾಜಗುರು ಅವರನ್ನು ಡಾಕ್ಟರಜಿಯವರು ಉಮರೇಡ್‌ದಲ್ಲಿ ಶ್ರೀ ಭಯ್ಯಾಜಿ ದಾಣಿಯವರ ಹೊಲದಲ್ಲಿ ಸುರಕ್ಷಿತವಾಗಿ ಇರಲು ವ್ಯವಸ್ಥೆ ಮಾಡಿದ್ದರು. ಅಷ್ಟೇ ಅಲ್ಲ, ಪುಣೆ ಕಡೆ ಹೋಗಲೇಬೇಡಿ ಎಂಬ ಎಚ್ಚರ ಸಹ ನೀಡಿದ್ದರು. ಅಲ್ಲಿ ಅವರಿಗಾಗಿ ಪೊಲೀಸರು ಹೊಂಚು ಹಾಕಿ ಕಾಯುತ್ತಿದ್ದ ಮಾಹಿತಿ ಡಾಕ್ಟರಜಿಗೆ ತಿಳಿದಿತ್ತು. ಅಷ್ಟಾದರೂ ಅವರ ಮಾತು ಅವಗಣನೆ ಮಾಡಿ ರಾಜಗುರು ಪುಣೆಗೆ ಹೋದರು ಹಾಗೂ ಕೆಲವೇ ದಿನಗಳಲ್ಲಿ ಬಂಧಿತರೂ ಆದರು.

ಮೂಲ: ಸ್ಮೃತಿ ಮಂದಾರ

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ವಿನಯ್ ಕೃಷ್ಣ ಹೆಚ್.ವಿ., ದೀಕ್ಷಿತ್ ನಾಯರ್, ಪಂಚಮಿ ಬಾಕಿಲಪದವು

# ಸಾಲುದ್ದದ ಸುದ್ದಿಗಳು

## ದೇಗುಲದ ಮಾದರಿಯಲ್ಲಿ ರಾಮೇಶ್ವರಂ ರೈಲು ನಿಲ್ದಾಣ



ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ರಾಮೇಶ್ವರಂ ತನ್ನ ಪಾವಿತ್ರ್ಯತೆ ಮತ್ತು ಜನಪ್ರಿಯತೆಯಿಂದಾಗಿ ಪ್ರತಿದಿನ ಹಲವಾರು ಭಕ್ತರನ್ನು ಸೆಳೆಯುತ್ತಿದೆ. ಹೀಗಾಗಿ ಇಲ್ಲಿಗೆ ಭೇಟಿ ನೀಡುವ ಭಕ್ತರ ಅನುಕೂಲಕ್ಕಾಗಿ ಹಳೆಯ ರೈಲು ನಿಲ್ದಾಣವನ್ನು 90 ಕೋಟಿ ರೂ ವೆಚ್ಚದಲ್ಲಿ ನವೀಕರಿಸಲು ನಿರ್ಧರಿಸಲಾಗಿದ್ದು ರಾಮೇಶ್ವರಂ ದೇವಾಲಯದ ಮಾದರಿಯಲ್ಲೇ ನಿರ್ಮಿಸಲಾಗುತ್ತಿದೆ. ಈ ನವೀಕರಣಗಳ ಪ್ರಾಥಮಿಕ ಉದ್ದೇಶವು ರಾಮನಾಥಸ್ವಾಮಿ ದೇವಾಲಯದ ವೈಭವವನ್ನು ಮರುಸೃಷ್ಟಿಸುವುದು ಮತ್ತು ದೇವಾಲಯದೊಳಗೆ ಕಂಡುಬರುವ ಕಂಬಗಳನ್ನು ಹೋಲುವ ಕಂಬಗಳನ್ನು ಸ್ಥಾಪಿಸುವುದು. ಸಂದರ್ಶಕರನ್ನು ಆಕರ್ಷಿಸಲು ಮತ್ತು ಅನ್ವೇಷಿಸಲು ಹೆಚ್ಚುವರಿ ಪ್ರವಾಸಿ ತಾಣವನ್ನು ಸ್ಥಾಪಿಸುವುದಾಗಿದೆ.


## ದೇಗುಲಗಳಲ್ಲಿ ಮೊಬೈಲ್ ಬಳಕೆ ನಿಷೇಧ

ಮುಜರಾಯಿ ಇಲಾಖೆಗೆ ಒಳಪಡುವ ರಾಜ್ಯದ 35,000 ದೇವಸ್ಥಾನಗಳಲ್ಲಿ ಮೊಬೈಲ್ ಫೋನ್ ಬಳಕೆಯನ್ನು ನಿಷೇಧಿಸಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ. ಇಲಾಖೆ ಹೊರಡಿಸಿದ ಸುತ್ತೋಲೆಯಲ್ಲಿ, ಈ ನಿರ್ಬಂಧದ ಬಗ್ಗೆ ಭಕ್ತರಿಗೆ ತಿಳಿಸುವ ಫಲಕಗಳನ್ನು ಪ್ರದರ್ಶಿಸಲು ದೇವಾಲಯಗಳಿಗೆ ನಿರ್ದೇಶಿಸಲಾಗಿದೆ. ಇತ್ತೀಚಿಗೆ ಮೊಬೈಲ್ ಬಳಕೆ ಹೆಚ್ಚಾಗಿದ್ದು, ದೇವಸ್ಥಾನದ ಸಿಬ್ಬಂದಿ ಹಾಗೂ ಇತರ ಭಕ್ತರಿಗೆ ತೊಂದರೆಯಾಗುತ್ತಿದೆ ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

## ಪಾಕಿಸ್ತಾನದಲ್ಲಿ ಹಿಂದೂ ದೇಗುಲದ ಮೇಲೆ ರಾಕೆಟ್ ಲಾಂಚರ್ ದಾಳಿ

ಪಾಕಿಸ್ತಾನದ ದಕ್ಷಿಣ ಸಿಂಧ್ ಪ್ರಾಂತ್ಯದಲ್ಲಿ ಭಾನುವಾರ ಹಿಂದೂ ದೇವಾಲಯವೊಂದರ ಮೇಲೆ ತಂಡವೊಂದು ರಾಕೆಟ್ ಲಾಂಚರ್‌ಗಳಿಂದ ದಾಳಿ ನಡೆಸಿದೆ. ಸಿಂಧ್ ಪ್ರಾಂತ್ಯದ ಕಾಶ್ಮೋರ್ ಪ್ರದೇಶದಲ್ಲಿ ಹಿಂದೂಗಳಿಗೆ ಸೇರಿದ ಸಣ್ಣ ದೇವಾಲಯ ಮತ್ತು ಪಕ್ಕದ ಮನೆಗಳ ಮೇಲೆ ದಾಳಿಕೋರರು ದಾಳಿ ನಡೆಸಿದ್ದಾರೆ. ಸ್ಥಳೀಯ ಹಿಂದೂ ಸಮುದಾಯದವರು ನಿರ್ಮಿಸಿದ ದೇವಾಲಯದ ಮೇಲೆ ದಾಳಿಕೋರರು ಮನಬಂದಂತೆ ಗುಂಡು ಹಾರಿಸಿದ್ದು, ಪೊಲೀಸರು ಘಟನಾ ಸ್ಥಳಕ್ಕೆ ತಲುಪಿ ಪರಿಸ್ಥಿತಿ ಅವಲೋಕಿಸಿದ್ದಾರೆ. ದಾಳಿಯ ಸಮಯದಲ್ಲಿ ದೇಗುಲ ಮುಚ್ಚಿತ್ತು. ದೇಗುಲವನ್ನು ಬಾಗ್ರಿ ಸಮುದಾಯವು ನಡೆಸುವ ಧಾರ್ಮಿಕ ಸೇವೆಗಳಿಗಾಗಿ ವಾರ್ಷಿಕವಾಗಿ ಮಾತ್ರ ತೆರೆಯಲಾಗುತ್ತದೆ ಎನ್ನಲಾಗಿದೆ.

## ಖಲಿಸ್ತಾನ್ ಕೃತ್ಯ ಖಂಡಿಸಿ ಭಾರತೀಯ ಅಮೆರಿಕನ್ನರ ಸಮಾವೇಶ




ಖಲಿಸ್ತಾನ್ ಬೆಂಬಲಿಗರು ಇತ್ತೀಚೆಗೆ ಭಾರತೀಯ ರಾಜತಾಂತ್ರಿಕ ಕಟ್ಟಡಕ್ಕೆ ಬೆಂಕಿ ಹಚ್ಚಲು ಯತ್ನಿಸಿದ ಘಟನೆಯ ಹಿನ್ನೆಲೆಯಲ್ಲಿ ಭಾರತಕ್ಕೆ ಒಗ್ಗಟ್ಟು ವ್ಯಕ್ತಪಡಿಸಲು ಭಾರತೀಯ ರಾಯಭಾರಿ ಕಚೇರಿಯ ಮುಂದೆ ಹಲವಾರು ಭಾರತೀಯ ಅಮೆರಿಕನ್ನರು ಶಾಂತಿ ಸಮಾವೇಶವನ್ನು ನಡೆಸಿದ್ದಾರೆ. ಖಲಿಸ್ತಾನ್ ಬೆಂಬಲಿಗರು ಜುಲೈ 2 ರಂದು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದ ವೀಡಿಯೊದಲ್ಲಿ ಸ್ಯಾನ್ ಫ್ರಾನ್ಸಿಸ್ಕೋದ ಭಾರತೀಯ ದೂತಾವಾಸಕ್ಕೆ ಬೆಂಕಿ ಹಚ್ಚಿದ ಕೃತ್ಯವನ್ನು ತೋರಿಸಲಾಗಿದೆ. ತಿಂಗಳ ಅವಧಿಯಲ್ಲಿ ನಡೆದ ಎರಡನೇ ಹಿಂಸಾಚಾರ ಇದಾಗಿದೆ.

## ಭಾರತದಲ್ಲಿ 15 ವರ್ಷಗಳಲ್ಲಿ 41.5 ಕೋಟಿ ಮಂದಿ ಬಡತನದಿಂದ ಹೊರಬಂದಿದ್ದಾರೆ: ಯುಎನ್ ವರದಿ

ಬಡತನವನ್ನು ನಿರ್ಮೂಲನೆ ಮಾಡುವಲ್ಲಿ ಭಾರತದ ಪ್ರಯತ್ನವನ್ನು ವಿಶ್ವಸಂಸ್ಥೆ ತನ್ನ ವರದಿಯಲ್ಲಿ ಶ್ಲಾಘಿಸಿದೆ. ಭಾರತದಲ್ಲಿ 15 ವರ್ಷಗಳ ಅವಧಿಯಲ್ಲಿ ಒಟ್ಟು 41.5 ಕೋಟಿ ಮಂದಿ ಬಡತನದಿಂದ ಹೊರಬಂದಿದ್ದಾರೆ ಎಂದಿದೆ. ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರದ ಗಮನಾರ್ಹ ಸಾಧನೆ ಇದಾಗಿದೆ ಎಂದು ವರದಿ ತಿಳಿಸಿದೆ.

## ವಂದೇ ಭಾರತ್, ಇತರ ರೈಲುಗಳ ದರವನ್ನು 25% ಇಳಿಸಿದ ರೈಲ್ವೇ



ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಸೇರಿದಂತೆ ಭಾರತದಾದ್ಯಂತ ಚಲಿಸುವ ಎಲ್ಲಾ ರೈಲುಗಳಲ್ಲಿ ಭಾರತೀಯ ರೈಲ್ವೆಯು ಎಸಿ ಚೇರ್ ಕಾರ್ ಮತ್ತು ಎಕ್ಸಿಕ್ಯೂಟಿವ್ ಕ್ಲಾಸ್ ದರವನ್ನು ಶೇಕಡಾ 25 ರಷ್ಟು ಕಡಿತಗೊಳಿಸಲಾಗುವುದು ಎಂದು ರೈಲ್ವೇ ಮಂಡಳಿಯ ಆದೇಶ ತಿಳಿಸಿದೆ. ವಂದೇ ಭಾರತ್ ಎಕ್ಸ್‌ಪ್ರೆಸ್, ಶತಾಬ್ದಿ ಎಕ್ಸ್‌ಪ್ರೆಸ್, ಅನುಭೂತಿ ಮತ್ತು ವಿಸ್ಟಾಡೋಮ್ ಕೋಚ್‌ಗಳಂತಹ ರೈಲುಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಆಕ್ಯುಪೆನ್ಸಿಗೆ ಅನುಗುಣವಾಗಿ ಈ ಕ್ರಮವು ಪ್ರಯೋಜನಕಾರಿಯಾಗಿದೆ. ದರಗಳು ಸಹ ಸ್ಪರ್ಧಾತ್ಮಕ ಸಾರಿಗೆ ವಿಧಾನಗಳ ಮೇಲೆ ಅವಲಂಬಿತವಾಗಿರುತ್ತದೆ. ರಜಾದಿನಗಳು ಅಥವಾ ಹಬ್ಬದ ವಿಶೇಷತೆಗಳಾಗಿ ಪರಿಚಯಿಸಲಾದ ವಿಶೇಷ ರೈಲುಗಳಲ್ಲಿ ಈ ಯೋಜನೆಯ ಅನ್ವಯಿಸುವುದಿಲ್ಲ.

## ಭಾರತೀಯ ರೂಪಾಯಿಗಳಲ್ಲಿ ವ್ಯಾಪಾರ ವಹಿವಾಟು ಪರಿಚಯಿಸಲಿದೆ ಬಾಂಗ್ಲಾದ 2 ಪ್ರಮುಖ ಬ್ಯಾಂಕ್‌ಗಳು

ಬಾಂಗ್ಲಾದೇಶದ ಎರಡು ಪ್ರಮುಖ ಬ್ಯಾಂಕ್‌ಗಳು ಭಾರತೀಯ ರೂಪಾಯಿಗಳಲ್ಲಿ ವ್ಯಾಪಾರ ವಹಿವಾಟುಗಳನ್ನು ಪರಿಚಯಿಸಲು ಯೋಜಿಸುತ್ತಿವೆ. ಬಾಂಗ್ಲಾದೇಶವು ತನ್ನ ಕುಸಿಯುತ್ತಿರುವ ವಿದೇಶಿ ವಿನಿಮಯ ಸಂಗ್ರಹವನ್ನು ಬಲಪಡಿಸುವ ಗುರಿಯನ್ನು ಹೊಂದಿರುವುದರಿಂದ ಈ ಕ್ರಮವು ಬಂದಿದೆ. ಸಾಂಪ್ರದಾಯಿಕವಾಗಿ, ಬಾಂಗ್ಲಾದೇಶದಲ್ಲಿ ವ್ಯಾಪಾರ ವಹಿವಾಟುಗಳನ್ನು ಯುಎಸ್ ಡಾಲರ್‌ಗಳಲ್ಲಿ ಪ್ರತ್ಯೇಕವಾಗಿ ನಡೆಸಲಾಗುತ್ತದೆ. ಆದರೆ, ಸರ್ಕಾರಿ ಸ್ವಾಮ್ಯದ ಸೊನಾಲಿ ಬ್ಯಾಂಕ್ ಮತ್ತು ಈಸ್ಟರ್ನ್ ಬ್ಯಾಂಕ್ ಇತ್ತೀಚೆಗೆ ಭಾರತದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಐಸಿಐಸಿಐ ಬ್ಯಾಂಕ್‌ನಲ್ಲಿ ರೂಪಾಯಿಗಳಲ್ಲಿ "ನಾಸ್ಟ್ರೋ" ಖಾತೆಗಳನ್ನು ತೆರೆದಿವೆ ಎಂದು ರಾಯಿಟರ್ಸ್ ವರದಿ ಮಾಡಿದೆ.

# ಬಾಳೆ ಗಿಡದ ತ್ಯಾಜ್ಯದಿಂದ ವರ್ಷಕ್ಕೆ 1.5 ಕೋಟಿ ಆದಾಯ ಗಳಿಸುತ್ತಿರುವ ಪಿ.ಎಂ ಮುರುಗೇಶನ್




ಮಧುರೈನ ಪಿ.ಎಂ ಮುರುಗೇಶನ್ ಅವರು ತಮ್ಮ ತಂದೆಯ ಕೃಷಿಗೆ ಸಹಕಾರಿಯಾಗಲು ತಮ್ಮ ಶಿಕ್ಷಣವನ್ನು ನಿಲ್ಲಿಸಲು ನಿರ್ಧರಿಸಿ ಕೃಷಿಯತ್ತ ಮುಖ ಮಾಡಿದರು. ಆಗ ಅವರ ಮನಸ್ಸಿನಲ್ಲಿ ಅನೇಕ ಆಲೋಚನೆಗಳಿದ್ದವು. ನಿರ್ದಿಷ್ಟವಾಗಿ ಹೇಳುವುದಾದರೆ, ರೈತರು ಟನ್‌ಗಟ್ಟಲೆ ಬಾಳೆ ತ್ಯಾಜ್ಯವನ್ನು ಸುಡುತ್ತಾರೆಯಾದರೂ, ಬೆಳೆಯ ಪ್ರತಿಯೊಂದು ಭಾಗಕ್ಕೂ ಒಂದು ಉಪಯುಕ್ತತೆ ಇದೆ ಎಂದು ಅವರು ಚೆನ್ನಾಗಿ ತಿಳಿದಿದ್ದರು. ಆದ್ದರಿಂದಲೇ ಅವರು ಬಾಳೆ ಗಿಡಗಳಿಗೆ ವಿಶೇಷ ಕಾಳಜಿ ನೀಡಲು ಪ್ರಾರಂಭಿಸಿದರು.

2008ರಲ್ಲಿ, ಅವರು ಬಾಳೆಹಣ್ಣಿನ ತ್ಯಾಜ್ಯದಿಂದ ಉತ್ಪನ್ನಗಳನ್ನು ತಯಾರಿಸುವ ಮಾರ್ಗಗಳ ಬಗ್ಗೆ ಯೋಚಿಸಲು ಪ್ರಾರಂಭಿಸಿದರು. ಅವರು ಹಗ್ಗಗಳನ್ನು ಮಾಡುವ ಕಲ್ಪನೆಯು ಆಸಕ್ತಿದಾಯಕವೆಂದು ಕಂಡುಕೊಂಡರು. ಹೂವನ್ನು ಕಟ್ಟಿ ಹೂಮಾಲೆ ಮಾಡಲು ಬಾಳೆ ಎಳೆಗಳನ್ನು ಬಳಸುತ್ತಿರುವುದನ್ನು ನೋಡಿದಾಗ ಅವರಿಗೆ ಈ ಆಲೋಚನೆ ಹುಟ್ಟಿಕೊಂಡಿತು. ತೆಂಗಿನ ಸಿಪ್ಪೆಯನ್ನು ಹಗ್ಗವನ್ನಾಗಿ ಪರಿವರ್ತಿಸುವ ಯಂತ್ರವನ್ನು ಆಧಾರವಾಗಿ ಬಳಸಿ ಅದೇ ರೀತಿ ಬಾಳೆ ನಾರನ್ನು ಸಂಸ್ಕರಿಸಲು ಉತ್ತಮವಾಗಿ ಕಾರ್ಯನಿರ್ವಹಿಸುವ ಯಂತ್ರವನ್ನು ಮಾರ್ಪಾಡಿಸಿದರು. ಪಿಎಂ ಮುರುಗೇಶನ್ ಅವರು ಒಟ್ಟು ನಾಲ್ಕು ವಿಧದ ಯಂತ್ರಗಳನ್ನು ತನ್ನ ಉದ್ಯಮಕ್ಕಾಗಿ ಅಭಿವೃದ್ಧಿಪಡಿಸಿ ಬಳಸುತ್ತಿದ್ದು ಮೂರಕ್ಕೆ ಪೇಟೆಂಟ್ ಪಡೆದಿದ್ದಾರೆ.

1.5 ಲಕ್ಷ ಬಂಡವಾಳ ಹೂಡಿ ಯಂತ್ರಕ್ಕೆ ಪೇಟೆಂಟ್ ಪಡೆದು ಹಗ್ಗಗಳನ್ನು ಬಳಸಿ ಬುಟ್ಟಿ, ಚೀಲ, ಚಾಪೆ ಮುಂತಾದ ವಸ್ತುಗಳನ್ನು ತಯಾರಿಸಲು ನಿರ್ಧರಿಸಿದರು. ಸಾಕಷ್ಟು ಪ್ರಯೋಗಗಳ ನಂತರ ದಿನಕ್ಕೆ ಸರಾಸರಿ 15,000 ಮೀಟರ್ ಹಗ್ಗ ಉತ್ಪಾದಿಸುವ ಮತ್ತು ಕೆಲಸ ಮಾಡಲು ಕೇವಲ ನಾಲ್ಕೇ ಜನರ ಅಗತ್ಯವಿರುವ ಯಂತ್ರವನ್ನು ಕಂಡುಹಿಡಿದರು.



> ಆರಂಭದಲ್ಲಿ ನನ್ನ ಆಲೋಚನೆ ಅಪಹಾಸ್ಯಕ್ಕೆ ಒಳಗಾಗಿತ್ತು. ಆದರೆ ಅವುಗಳಿಗೆ ಕಿವಿಕೊಡದೆ ನನ್ನ ಯೋಜನೆಯಂತೆ ಮುನ್ನುಗ್ಗಿದೆ. ಇದೀಗ ಮೋದಿಜಿ ಅವರ ಮಾತುಗಳು ಇನ್ನೂ ಶ್ರಮವಹಿಸಿ ರಾಷ್ಟ್ರಾದ್ಯಂತ ಅನೇಕ ಕೃಷಿಕರಿಗೆ ತರಬೇತಿ ನೀಡಲು ಉತ್ಸುಕತೆಯನ್ನು ಹೆಚ್ಚಿಸಿದೆ.
> – ಪಿ.ಎಂ. ಮುರುಗೇಶನ್

ಐದು ಜನರೊಂದಿಗೆ ಪ್ರಾರಂಭಿಸಿದ್ದ ಮಧುರೈನ ಎಂಎಸ್ ರೋಪ್ಸ್ ಉತ್ಪಾದನಾ ಕೇಂದ್ರ 350ಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡುತ್ತಿದೆ. ಅವರಲ್ಲಿ ಹೆಚ್ಚಿನವರು ಮಹಿಳೆಯರು.

ಈ ಸಾಹಸೋದ್ಯಮವು 500 ಟನ್‌ಗಳಷ್ಟು ಬಾಳೆಹಣ್ಣಿನ ತ್ಯಾಜ್ಯವನ್ನು ಸಂಸ್ಕರಿಸುತ್ತದೆ ಮತ್ತು ವಾರ್ಷಿಕವಾಗಿ ಸುಮಾರು 1.5 ಕೋಟಿ ರೂಪಾಯಿಗಳನ್ನು ಗಳಿಸುತ್ತಿದೆ. ಹಗ್ಗದಿಂದ ತಯಾರಿಸಿದ ಉತ್ಪನ್ನಗಳನ್ನು, ಮಲೇಷ್ಯಾ, ಸಿಂಗಾಪುರ್, ಫ್ರಾನ್ಸ್ ಮತ್ತು ನೆದರ್ಲ್ಯಾಂಡ್ಸ್ ಸೇರಿದಂತೆ ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ.

> ಮುರುಗೇಶನ್ ಅವರ ಅನ್ವೇಷಣೆ ಕೇವಲ ತ್ಯಾಜ್ಯ ನಿರ್ವಹಣೆಯ ಸಮಸ್ಯೆಯ ಪರಿಹಾರವಾಗಿರದೆ, ರೈತರಿಗೆ ಆದಯ ಗಳಿಸುವ ಹೊಸ ಸಾಧ್ಯತೆಗಳನ್ನು ತಿಳಿಸುತ್ತದೆ
> – ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ನರೇಂದ್ರ ಮೋದಿ



ಮುರುಗೇಶನ್ ಅವರು ಇದುವರೆಗೂ ಕೇರಳ, ಆಂಧ್ರಪ್ರದೇಶ, ಮಣಿಪುರ, ಬಿಹಾರ ಮತ್ತು ಗುಜರಾತ್ ಸೇರಿದಂತೆ ರಾಷ್ಟ್ರಾದ್ಯಂತ 1500ಕ್ಕೂ ಹೆಚ್ಚು ರೈತರಿಗೆ ತರಬೇತಿ ನೀಡಿದ್ದಾರೆ. ಆಫ್ರಿಕಾದ ಶ್ರಮಸಂಸ್ಕೃತಿಯ ಮಹಿಳೆಯರಿಗೂ ತನ್ನ ಕೌಶಲ್ಯವನ್ನು ಕಲಿಸಲು ನಿರ್ಧರಿಸಿದ್ದಾರೆ. ಇವರ ಪ್ರಯತ್ನವನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮನ್ ಕಿ ಬಾತ್‌ನಲ್ಲಿ ಗುರುತಿಸಿ ಅಭಿನಂದನೆ ಸಲ್ಲಿಸಿದ್ದಾರೆ.

ತ್ಯಾಜ್ಯವನ್ನು ಬಳಸಿಕೊಂಡು ಬದುಕು ಕಟ್ಟಿಕೊಂಡು ಆತ್ಮನಿರ್ಭರ ಭಾರತದ ಕನಸನ್ನು ನನಸು ಮಾಡುತ್ತಾ ಹಾಗೂ ಕೃಷಿಯಲ್ಲೂ ಹೊಸ ಆವಿಷ್ಕಾರಗಳನ್ನು ಮಾಡಬಹುದು ಎಂಬುದಕ್ಕೆ ಮುರುಗೇಶನ್ ಅವರು ಮಾದರಿ.

ಮೂಲ: ಭಾರತ ವಾಣಿ

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JULY 2023

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-08-2023



## ಅಖಿಲ ಭಾರತೀಯ ಪ್ರಾಂತ ಪ್ರಚಾರಕ ಬೈಠಕ್–2023 ಸಂಪನ್ನ । ಮಣಿಪುರದಲ್ಲಿ ಶಾಂತಿ ಸ್ಥಾಪನೆ ಪ್ರಯತ್ನಕ್ಕೆ ವೇಗ ನೀಡಲು ನಿರ್ಧಾರ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತ 'ಪ್ರಾಂತ್ ಪ್ರಚಾರಕ್ ಬೈಠಕ್' ತಮಿಳುನಾಡಿನ ಕೊಯಮತ್ತೂರು ಸಮೀಪದ ಊಟಿಯಲ್ಲಿ ನಡೆಯಿತು. ಜುಲೈ 13–15ರ ವರೆಗೆ ನಡೆದ ಈ ಬೈಠಕ್ ನಲ್ಲಿ ಸಂಘದ ಶಾಖೆಗಳನ್ನು ತಮ್ಮ ಸಾಮಾಜಿಕ ಜವಾಬ್ದಾರಿಗಳಿಗೆ ಅನುಗುಣವಾಗಿ ಹೆಚ್ಚು ಸಕ್ರಿಯ ಗೊಳಿಸುವ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಮಣಿಪುರದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಲಾಯಿತು. ಮಣಿಪುರದಲ್ಲಿ ಸಂಘದ ಸ್ವಯಂಸೇವಕರು, ಸಮಾಜದ ಪ್ರಜ್ಞಾವಂತ ಜನರೊಂದಿಗೆ ಜೊತೆಗೂಡಿ ಶಾಂತಿ ಮತ್ತು ಪರಸ್ಪರ ವಿಶ್ವಾಸದ ವಾತಾವರಣವನ್ನು ಸೃಷ್ಟಿಸಲು ಮತ್ತು ನೊಂದ ಬಂಧುಗಳಿಗೆ ಅಗತ್ಯ ಸಹಾಯವನ್ನು ನೀಡಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ನೊಂದ ಜನರಿಗಾಗಿ ಸಂಘದ ಸ್ವಯಂಸೇವಕರಿಂದ ನಡೆಯುತ್ತಿರುವ ಸಹಾಯ ಕಾರ್ಯವನ್ನು ವಿಸ್ತರಿಸಲು ಸಭೆಯಲ್ಲಿ ಆಲೋಚಿಸಲಾಯಿತು. ಸಮಾಜದ ಎಲ್ಲಾ ವರ್ಗದವರು ಪರಸ್ಪರ ಸೌಹಾರ್ದತೆ ಮತ್ತು ಶಾಂತಿಯನ್ನು ಸ್ಥಾಪಿಸುವ ಪ್ರಯತ್ನಗಳನ್ನು ವೇಗಗೊಳಿಸಲು ನಿರ್ಧರಿಸಲಾಯಿತು. ಇದರೊಂದಿಗೆ ಶಾಶ್ವತ ಶಾಂತಿ ಮತ್ತು ಪುನರ್ವಸತಿಗೆ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಲಾಯಿತು.

ಸಭೆಯಲ್ಲಿ ಹಿಮಾಚಲದ ಮಂಡಿ, ಕುಲು ಮೊದಲಾದ ಜಿಲ್ಲೆಗಳಲ್ಲಿ ಹಾಗೂ ಉತ್ತರಾಖಂಡ ಮತ್ತು ದೆಹಲಿಯಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹದಿಂದ ಸಂತ್ರಸ್ತರಾದ ಜನರಿಗಾಗಿ ಸಂಘವು ಮಾಡುತ್ತಿರುವ




ಸೇವಾ ಕಾರ್ಯಗಳ ಕುರಿತು ಪರಿಶೀಲಿಸಲಾಯಿತು ಜೊತೆಗೆ ತಕ್ಷಣದ ಪರಿಹಾರ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಈ ಹಿಂದೆ ನಡೆದ ಇತರೆ ಅನಾಹುತಗಳ ನಂತರ ಆಗಿರುವ ಸೇವಾ ಕಾರ್ಯಗಳ ಕುರಿತು ವಿವಿಧ ಪ್ರಾಂತಗಳಿಂದ ಆಗಮಿಸಿದ ಅಧಿಕಾರಿಗಳ ಬಳಿ ಮಾಹಿತಿ ಪಡೆಯಲಾಯಿತು.


ಸಂಘದ ಶಾಖೆಗಳಿಂದ ಸಾಮಾಜಿಕ ಜವಾಬ್ದಾರಿಗಳ ಮೂಲಕ, ತಮ್ಮ ಸುತ್ತಲಿನ ಪ್ರದೇಶದ ಅಗತ್ಯಗಳಿಗೆ ಅನುಗುಣವಾಗಿ ಅನೇಕ ಸಾಮಾಜಿಕ ಮತ್ತು ಸೇವಾ ಕಾರ್ಯಗಳನ್ನು ಕಾಲಕಾಲಕ್ಕೆ ಮಾಡಲಾಗುತ್ತದೆ. ಸಭೆಯಲ್ಲಿ ಇಂತಹ ಕಾರ್ಯಗಳ ವಿವರಗಳೊಂದಿಗೆ ಅನುಭವಗಳನ್ನು ವಿನಿಮಯ ಮಾಡಿಕೊಳ್ಳಲಾಗಿದ್ದು, ಈ ನಿಟ್ಟಿನಲ್ಲಿ ಸಂಘದ ಪ್ರತಿಯೊಂದು ಶಾಖೆಯನ್ನು ಇನ್ನಷ್ಟು ಕ್ರಿಯಾಶೀಲಗೊಳಿಸಲು ಯೋಜನೆ ರೂಪಿಸಲಾಗಿದೆ.

2023ರಲ್ಲಿ ಸಂಘದ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷಗಳು ಸೇರಿದಂತೆ ಒಟ್ಟು 105 ಸಂಘ ಶಿಕ್ಷಾ ವರ್ಗಗಳು ಪೂರ್ಣಗೊಂಡಿವೆ, ಇದರಲ್ಲಿ ದೇಶಾದ್ಯಂತ ಒಟ್ಟು 21566 ಶಿಕ್ಷಾರ್ಥಿಗಳು ಭಾಗವಹಿಸಿದ್ದರು. ಇವರಲ್ಲಿ ನಲವತ್ತು ವರ್ಷದೊಳಗಿನ 16908 ಶಿಕ್ಷಾರ್ಥಿಗಳು ಹಾಗೂ ನಲವತ್ತರಿಂದ ಅರವತ್ತೈದು ವರ್ಷದೊಳಗಿನ 4658 ಶಿಕ್ಷಾರ್ಥಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಪಡೆದ ಮಾಹಿತಿಯ ಪ್ರಕಾರ, ದೇಶದಾದ್ಯಂತ 39451 ಸ್ಥಳಗಳಲ್ಲಿ ಸಂಘದ 63724 ದೈನಂದಿನ ಶಾಖಾಗಳು, 23299 ಸಾಪ್ತಾಹಿಕ ಮಿಲನ್‌ಗಳು ಮತ್ತು 9548 ಮಾಸಿಕ ಮಂಡಲಿಗಳು ನಡೆಯುತ್ತಿವೆ. ಸಭೆಯಲ್ಲಿ ಸಂಘದ ವಿವಿಧ ಕಾರ್ಯಚಟುವಟಿಕೆಗಳ (ಗತಿವಿಧಿಗಳ) ಜೊತೆಗೆ ಮುಂಬರುವ ಶತಮಾನೋತ್ಸವ ವರ್ಷದ ಕಾರ್ಯ ವಿಸ್ತಾರ ಮತ್ತು ಶತಾಬ್ದಿ ವಿಸ್ತಾರಕ್ ಯೋಜನೆಗಳ ಬಗ್ಗೆಯೂ ಆಲೋಚಿಸಲಾಯಿತು.

ಸಭೆಯಲ್ಲಿ ಪ್ರಮುಖವಾಗಿ ಸಂಘಟನಾತ್ಮಕ ವಿಷಯಗಳ ಕುರಿತು ಚರ್ಚಿಸಲಾಯಿತು. ಈ ಸಭೆಯಲ್ಲಿ ಪ್ರಾಂತೀಯ ಪ್ರಚಾರಕರೊಂದಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮತ್ತು ಎಲ್ಲಾ ಸಹಸರಕಾರ್ಯವಾಹರು ಮತ್ತು ಇತರ ಎಲ್ಲಾ ಅಖಿಲ ಭಾರತ ಮತ್ತು ಕ್ಷೇತ್ರೀಯ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ಹಾಗೆಯೇ ಸಂಘ ಪ್ರೇರಿತ ವಿವಿಧ ಸಂಘಟನೆಗಳ ಅಖಿಲ ಭಾರತೀಯ ಸಂಘಟನಾ ಮಂತ್ರಿಗಳು ಭಾಗವಹಿಸಿದ್ದರು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ತಿಳಿಸಿದ್ದಾರೆ.

## 105 ಪ್ರಾಚೀನ ವಸ್ತುಗಳನ್ನು ಭಾರತಕ್ಕೆ ಮರಳಿಸಿದ ಅಮೆರಿಕ

ನ್ಯೂಯಾರ್ಕ್‌ನಲ್ಲಿರುವ ಭಾರತೀಯ ದೂತಾವಾಸದಲ್ಲಿ ಅಮೆರಿಕದ ಕಡೆಯಿಂದ ಹಸ್ತಾಂತರಿಸಲ್ಪಟ್ಟ 105 ಕಳ್ಳಸಾಗಣೆಯಾದ ಪ್ರಾಚೀನ ವಸ್ತುಗಳನ್ನು ಸ್ವದೇಶಕ್ಕೆ ಹಿಂದಿರುಗಿಸುವ ಸಮಾರಂಭವು ನಡೆಯಿತು. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ನೀಡಿದ ಐತಿಹಾಸಿಕ ಭೇಟಿಯ ನಂತರ ಈ ಕ್ರಮ ನಡೆದಿದೆ. ಪ್ರಾಚೀನ ವಸ್ತುಗಳನ್ನು ಶೀಘ್ರದಲ್ಲೇ ಭಾರತಕ್ಕೆ ಸಾಗಿಸಲಾಗುತ್ತದೆ. ಪ್ರಧಾನಮಂತ್ರಿಯವರ ಭೇಟಿಯ ಸಂದರ್ಭದಲ್ಲಿ, ಭಾರತ ಮತ್ತು ಯುಎಸ್ ಸಾಂಸ್ಕೃತಿಕ ಆಸ್ತಿ ಒಪ್ಪಂದದಲ್ಲಿ ಕೆಲಸ ಮಾಡಲು ಒಪ್ಪಿಕೊಂಡಿದ್ದರಿಂದ ಅದು ಸಾಂಸ್ಕೃತಿಕ ಕಲಾಕೃತಿಗಳ ಅಕ್ರಮ ಸಾಗಣೆಯನ್ನು ತಡೆಯಲು ಸಹಾಯ ಮಾಡುತ್ತದೆ.



105 ಕಲಾಕೃತಿಗಳು ಭಾರತದ ವಿವಿಧ ಭಾಗಗಳನ್ನು ಪ್ರತಿನಿಧಿಸುತ್ತವೆ. ಇದರಲ್ಲಿ 47 ಪೂರ್ವ ಭಾರತ, 27 ದಕ್ಷಿಣ ಭಾರತ, 22 ಮಧ್ಯ ಭಾರತ, 6 ಉತ್ತರ ಭಾರತ ಮತ್ತು 3 ಪಶ್ಚಿಮ ಭಾರತಕ್ಕೆ ಸೇರಿದವು. ಸಾಮಾನ್ಯ ಶಕವರ್ಷ 2ನೇ–3ನೇ ಶತಮಾನದಿಂದ ಸಾಮಾನ್ಯ ಶಕ ವರ್ಷ 18ನೇ–19ನೇ ಶತಮಾನದವರೆಗೆ ವ್ಯಾಪಿಸಿರುವ ಕಲಾಕೃತಿಗಳು ಟೆರಾಕೋಟಾ, ಕಲ್ಲು, ಲೋಹ ಮತ್ತು ಮರದಿಂದ ಮಾಡಲ್ಪಟ್ಟಿವೆ. ಈ ಸಂದರ್ಭದಲ್ಲಿ ಮಾತನಾಡಿದ ಯುನೈಟೆಡ್ ಸ್ಟೇಟ್ಸ್‌ನಲ್ಲಿನ ಭಾರತದ ರಾಯಭಾರಿ ತರಂಜಿತ್ ಸಿಂಗ್ ಸಂಧು ಅವರು ಯುಎಸ್ ತಂಡಕ್ಕೆ ಸಹಕಾರ ಮತ್ತು ಬೆಂಬಲಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದರು. ಭಾರತದ ಜನರಿಗೆ ಇವು ಕೇವಲ ಕಲಾ ತುಣುಕುಗಳಲ್ಲ ಅವರ ಜೀವನ ಪರಂಪರೆ ಮತ್ತು ಸಂಸ್ಕೃತಿಯ ಭಾಗವಾಗಿದೆ ಎಂದರು.

## ಮಲೇಷ್ಯಾದಲ್ಲಿ ನೇತಾಜಿ ಪ್ರತಿಮೆ ಅನಾವರಣ



ಮೂರು ದಿನಗಳ ಮಲೇಷ್ಯಾ ಭೇಟಿಯಲ್ಲಿದ್ದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಕೌಲಾಲಂಪುರದಲ್ಲಿ ಭಾರತೀಯ ರಾಷ್ಟ್ರೀಯ ಸೇನೆ ಯೋಧರ ಸಮ್ಮುಖದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದರು. ಟ್ವಿಟ್ಟರ್‌ನಲ್ಲಿ ಚಿತ್ರಗಳನ್ನು ಪೋಸ್ಟ್ ಮಾಡಿರುವ ರಾಜನಾಥ್ ಸಿಂಗ್, ನೇತಾಜಿ ಮತ್ತು ಐಎನ್‌ಎ ಮಲೇಷ್ಯಾದಲ್ಲಿ ಪ್ರಮುಖ ಪರಂಪರೆಯನ್ನು ಹೊಂದಿದೆ. ಶೌರ್ಯ, ದೇಶಭಕ್ತಿಯ ಪ್ರತೀಕವಾದ ಸುಭಾಷ್ ಚಂದ್ರ ಬೋಸ್ ಅವರು ಭಾರತ ಮತ್ತು ಮಲೇಷ್ಯಾದಲ್ಲಿನ ಪೀಳಿಗೆಗೆ ಸ್ಫೂರ್ತಿ ನೀಡುತ್ತಲೇ ಇದ್ದಾರೆ ಎಂದಿದ್ದಾರೆ. ಇದೇ ವೇಳೆ ಬರ್ಮಾ ಗಡಿಯಲ್ಲಿ ಸುಭಾಷ್ ಚಂದ್ರ ಬೋಸ್ ಜೊತೆಗೆ ಹೋರಾಡಿದ್ದ 99 ವರ್ಷದ ಹಿರಿಯ ಐಎನ್‌ಎ ಹೋರಾಟಗಾರ ಎರಡನೇ ಲೆಫ್ಟಿನೆಂಟ್ ಸುಂದರಮ್ ಅವರನ್ನು ರಾಜನಾಥ್ ಸಿಂಗ್ ಸನ್ಮಾನಿಸಿದರು.



ಶಿವನ ವಾಸಸ್ಥಾನವೆಂದು ನಂಬಲಾದ ಕೈಲಾಸ ಪರ್ವತಕ್ಕೆ ಭೇಟಿ ನೀಡಲು ಯಾತ್ರಾರ್ಥಿಗಳಿಗೆ ಭಾರತದಿಂದಲೇ ಅವಕಾಶ ನೀಡಲಾಗುತ್ತಿದೆ. ಬಾರ್ಡರ್ ರೋಡ್ ಆರ್ಗನೈಸೇಶನ್ (ಬಿಆರ್‌ಒ) ಪಿಥೋರಗಢ ಜಿಲ್ಲೆಯ ನಾಭಿಧಾಂಗ್‌ನಲ್ಲಿರುವ ಕೆಎಂವಿಎನ್ ಹಬ್‌ನಿಂದ ಭಾರತ–ಚೀನಾ ಗಡಿಯಲ್ಲಿರುವ ಲಿಪುಲೇಖ್ ಪಾಸ್ ವರೆಗಿನ 6.5 ಕಿ.ಮೀ. ಉದ್ದದ ರಸ್ತೆಯನ್ನು ನಿರ್ಮಿಸುವ ಕೆಲಸ ಆರಂಭಿಸಿದೆ, ಇದು ಯಾವುದೇ ಪ್ರತಿಕೂಲ ಸಂದರ್ಭ ಎದುರಾಗದಿದ್ದರೆ ಸೆಪ್ಟೆಂಬರ್‌ನಲ್ಲಿ ಪೂರ್ಣಗೊಳ್ಳಲಿದೆ ಎಂದು ಬಿಆರ್‌ಒ ಅಧಿಕಾರಿಗಳು ತಿಳಿಸಿದ್ದಾರೆ.

## ದೌರ್ಜನ್ಯ ಎಸಗಿದವರನ್ನು ತಪ್ಪಿಸಿಕೊಳ್ಳಲು ಬಿಡುವುದಿಲ್ಲ: ಮೋದಿ



ಮಣಿಪುರದ ಮಹಿಳಾ ದೌರ್ಜನ್ಯ ಪ್ರಕರಣದಲ್ಲಿ ಯಾವುದೇ ತಪ್ಪಿತಸ್ಥರನ್ನು ತಪ್ಪಿಸಿಕೊಳ್ಳಲು ಬಿಡುವುದಿಲ್ಲ ಮತ್ತು ಕಾನೂನು ತನ್ನ ಎಲ್ಲಾ ಶಕ್ತಿಯೊಂದಿಗೆ ತನ್ನ ಮಾರ್ಗವನ್ನು ಅನುಸರಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಮುನ್ನ ಸಂಸತ್ ಭವನದ ಸಂಕೀರ್ಣದಲ್ಲಿ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದರು. "ಮಣಿಪುರದ ಘಟನೆಯು ಯಾವುದೇ ನಾಗರಿಕ ಸಮಾಜಕ್ಕೆ ನಾಚಿಕೆಗೇಡಿನ ಸಂಗತಿಯಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಎಲ್ಲಾ ಮುಖ್ಯಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಬಲಪಡಿಸಬೇಕು" ಎಂದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.